ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮೈಸೂರು ನಗರ ಪ್ರವಾಸಿಗರ ತಾಣ. ದಿನಕ್ಕೆ ಐದಾರು ಸಲ ವಿದ್ಯುತ್ ಹೋಗುತ್ತಿದ್ದರೆ ಹೊರಗಡೆಯಿಂದ ಬಂದವರು ಮೈಸೂರಿನ ಮಹಿಮೆಯನ್ನು ಕೊಂಡಾಡಿಕೊಂಡು ಹೋಗಬೇಕೋ ಅಥವಾ ಬೈದುಕೊಂಡು ಹೋಗಬೇಕೋ? ಇದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ?

ಶ್ರೀ ಎ. ರಾಮದಾಸ್ : ಓಲ್ಟೇಜ್ ಸಮಸ್ಯೆಯಿಂದ ಗ್ರಿಡ್ ಒಂದು ಸಲ ಹೋದರೆ 25 ರಿಂದ 30 ನಿಮಿಷ ಈ ರೀತಿ ಆಗುತ್ತದೆ. ಪ್ರತಿ ದಿವಸ ಮೂರು ನಾಲ್ಕು ಸಲ ಗ್ರಿಡ್ ಫೇಲ್ಯೂರ್ ಆಗುತ್ತಿದೆಯೆಂದರೆ ಆ ಸಿಸ್ಟಂನ್ನು ಸರಿ ಮಾಡಿ. ತಾವು ವಿಶ್ವಬ್ಯಾಂಕ್ ಸ್ಕೀಮ್‌ನಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದೀರಿ. ಅದೆಲ್ಲವನ್ನು ನಾವು ಅಪ್ರಿಶಿಯೇಟ್ ಮಾಡುತ್ತೇವೆ. ಈ ಕ್ಷಣದಲ್ಲಿ ಏನು ಮಾಡಬೇಕು ಅದನ್ನು ಮಾಡಿ.

ಹಾಸನದಲ್ಲಿ ಟ್ಯಾಪಿಂಗ್ ಮಾಡಿರುವುದನ್ನು ನಿಲ್ಲಿಸಿ. ಇದಕ್ಕೆ ನೀವು ಒಂದೂವರೆ ವರ್ಷಗಳನ್ನು ಏಕೆ ತೆಗೆದುಕೊಳ್ಳುತ್ತಿದ್ದೀರಿ? ಇರುವ ಮಾರ್ಗದಲ್ಲಿ ಅನ್- ಅಥರೈಸ್ಡ್ ಟ್ಯಾಪಿಂಗ್ ಇದೆ, ಅದನ್ನು ನಿಲ್ಲಿಸುತ್ತೇವೆ ಎಂದಾದರೂ ಮಾನ್ಯಸಚಿವರು ಹೇಳಬೇಕಲ್ಲವೇ?

ಶ್ರೀ ಬಸವರಾಜ ಹೆಚ್ ಪಾಟೀಲ್ ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತಿದೆ. ಅದಷ್ಟು ಬೇಗನೇ ಎಲ್ಲಿ ವಿದ್ಯುತ್ ಕಳ್ಳತನವಾಗುತ್ತಿದೆಯೋ ಅದನ್ನು ತಪ್ಪಿಸಲಿಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ನಿಮ್ಮ ಕಳಕಳಿ ನನಗೆ ಅರ್ಥವಾಗಿದೆ, ನಾನು ಅದನ್ನು ಸರಿಪಡಿಸುತ್ತೇನೆಂದು ಹೇಳಿದ್ದಾರಲ್ಲಾ, ಮತ್ತೆ ಏಕೆ ನೀವು ಪ್ರಸ್ತಾಪಿಸುತ್ತೀರಿ? ಅವರನ್ನು ಹೊಸದಾಗಿ ಮಂತ್ರಿಗಳಾಗಿದ್ದರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, ಹೊಸದಾಗಿ ಮಂತ್ರಿ ಮಂಡಲಕ್ಕೆ ಸೇರಿರುವವರನ್ನು ಸದನಕ್ಕೆ ಪರಿಚಯಿಸಿ ಕೊಟ್ಟಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು: ಹೊಸದಾಗಿ ಮಂತ್ರಿಗಳಾಗಿರುವವರು ಇನ್ನೂ ಕೆಲವರು ಸದನಕ್ಕೆ ಬಂದಿಲ್ಲ ಪ್ರಶ್ನೋತ್ತರ ಮುಗಿದ ನಂತರ ನೋಡೋಣ.

ಬೆಂಗಳೂರು ನಗರದಲ್ಲಿ ಮಳೆಯಿಂದ ಉಂಟಾದ ಹಾನಿ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

2(27) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

ಅ) ಬೆಂಗಳೂರು ನಗರದಲ್ಲಿ ಮೇ ತಿಂಗಳಲ್ಲಿ ಬಿದ್ದ ಮಳೆಯಿಂದ ಸಾವಿಗೀಡಾದವರ ಸಂಖ್ಯೆ ಎಷ್ಟು?

ಆ) ಮಳೆಯಿಂದ ಉಂಟಾಗಿರುವ ಹಾನಿಯ ಪ್ರಮಾಣವೆಷ್ಟು?

ಇ) ಬೆಂಗಳೂರು ನಗರದಲ್ಲಿ ನೂರಾರು ಮನೆಗಳಿಗೆ ನೀರು ನುಗ್ಗಿ ಅಪಾರ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಚರಂಡಿಗಳಲ್ಲಿನ ಮಣ್ಣು ತೆಗೆಯಲು ಹಾಗೂ ರಸ್ತೆಗಳ ನೀರು ಸರಾಗವಾಗಿ ಹರಿದು ಹೋಗಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಮಳೆ ನೀರು ಸಂಗ್ರಹಣಾ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಜಾರಿಗೆ ತಂದರೆ ನೀರಿನ ಅಭಾವವನ್ನು ತಪ್ಪಿಸುವುದರ ಜೊತೆಗೆ ಮನೆಗಳಿಗೆ ನೀರು ನುಗ್ಗುವುದನ್ನು ತಡೆಗಟ್ಟಬಹುದಲ್ಲವೇ?

ಊ) ಮಳೆ ಹಾನಿಯಿಂದ ಉಂಟಾದ ಕಾಮಗಾರಿಗಳಿಗೆ ಖರ್ಚು ಮಾಡಿದ ಹಣವೆಷ್ಟು?

ಋ) ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) 5.

ಆ) ಸುಮಾರು ರೂ. 10.00 ಕೋಟಿಗಳು.

ಇ) ಹೌದು.

ಈ) ಪ್ರಮುಖ ಹಾಗೂ ಇತರೆ ಚರಂಡಿಗಳಲ್ಲಿ ಹೂಳು ತೆಗೆಯಲಾಗಿದೆ. ಇದುವರೆವಿಗೂ 1.83 ಲಕ್ಷ ಘ. ಮೀ. ಪ್ರಮಾಣದ ಹೂಳನ್ನು ತೆಗೆಯಲಾಗಿದೆ. ಎಲ್ಲೆಲ್ಲಿ ನೀರು ಹರಿಯಲು ಅಡಚಣೆಯಗಳಿವೆಯೋ ಅವುಗಳನ್ನು ತೆರವುಗೊಳಿಸಲಾಗಿದೆ.

ಉ) ಅಗತ್ಯವಾದ ಬೈಲಾವನ್ನು ತಯಾರಿಸಲಾಗುತ್ತಿದೆ. ಅದನ್ನು ಜಾರಿಗೆ ತರಲಾಗುವುದು.

ಊ) ಕೆಲಸಗಳನ್ನು ಪ್ರಾರಂಭಿಸಲಾಗಿದ್ದು, ಇದುವರೆವಿಗೂ ಈ ಕೆಲಸಗಳಿಗೆ ಯಾವುದೇ ಹಣವನ್ನು ಪಾವತಿ ಮಾಡಿರುವುದಿಲ್ಲ.

ಋ) ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ರೂ. 43.50 ಲಕ್ಷಗಳ 7 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ಇದರಲ್ಲಿ ಎರಡು ಕಾಮಗಾರಿಗಳು (ರೂ. 7.50 ಲಕ್ಷ) ಪ್ರಗತಿಯ ಹಂತದಲ್ಲಿರುತ್ತದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷವೂ ಮಳೆ ಬೀಳುತ್ತಿರುವುದು ಎಲ್ಲರ ಗಮನಕ್ಕೆ ಸಹಾ ಬಂದಿದೆ. ಆದರೂ ಕೂಡ ಈ ವರ್ಷ ಮಳೆಯಿಂದ ಸಾವಿಗೀಡಾದವರು ಐದು ಜನ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಇದಕ್ಕೆ ಕಾರಣಗಳೇನು? ಮಳೆ ಬರುವುದಕ್ಕೆ ಮುಂಚೆಯೇ ಮೋರಿಗಳಲ್ಲಿ ಹೂಳು ತೆಗೆಯುತ್ತಿಲ್ಲವೇ? ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಅಥವಾ ಅಧಿಕಾರಿಗಳ ಗಮನದಲ್ಲಿ ಇದು ಇಲ್ಲವೇ? ಇದಕ್ಕಾಗಿ ಎಷ್ಟು ಹಣವನ್ನು ಪರಿಹಾರವಾಗಿ ನೀಡಲಾಗಿದೆ?

ನೂರು ಕೋಟಿ ರೂಪಾಯಿಗಳನ್ನು ದೊಡ್ಡ ಮೋರಿಗಳ ದುರಸ್ತಿಗಾಗಿ ಖರ್ಚು ಮಾಡುತ್ತೇವೆ ಎಂದು ಕಳೆದ ಮೂರು ವರ್ಷಗಳಿಂದ ಹೇಳುತ್ತಲೇ ಬರಲಾಗುತ್ತಿದೆ. ಇದಕ್ಕಾಗಿ ಹುಡ್ಕೋದಿಂದ ವಿಶೇಷ ನೆರವು ಪಡೆದು ದೊಡ್ಡ ಮೋರಿಗಳನ್ನು ಮೇಲ್ದರ್ಜೆಗೆ ಏರಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದಾರೆ. ಮೂರು ಜನ ಕಮೀಷನರ್ ಬಂದಾಗಲೂ ಕೂಡ ಅದೇ ಮಾತನ್ನು ಹೇಳಿದ್ದಾರೆ. ಇದನ್ನು ಯಾವಾಗ ಮಾಡುತ್ತೀರಿ? ಅಥವಾ ಇದನ್ನು ಮಾಡುವುದೇ ಇಲ್ಲವೇ?

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮೇ ತಿಂಗಳ 25ನೇ ತಾರೀಖು ಸುಮಾರು 9.50 ಸೆಂ.ಮೀ. ಮಳೆ ಬೆಂಗಳೂರು ನಗರದಲ್ಲಿ ದಾಖಲಾಗಿತ್ತು, ಇದರಿಂದಾಗಿ ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ತಗ್ಗು ಪ್ರದೇಶಗಳಲ್ಲಿ ನೀರು ನಿಂತು ಅಲ್ಲಿ ವಾಸಿಸುತ್ತಿರುವಂತಹ ಜನಗಳ ಆಸ್ತಿ-ಪಾಸ್ತಿಗಳಿಗೆ ನಷ್ಟ ಉಂಟಾಗಿರುತ್ತದೆ. ಈಗಾಗಲೇ ನಾವು ತಿಳಿಸಿರುವ ಹಾಗೆ, ಐದು ಜನ ಈ ಮಳೆಯಿಂದಾಗಿ ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಅಂತಹ ಪ್ರತಿ ಕುಟುಂಬ ವರ್ಗದವರಿಗೆ ತಲಾ 50 ಸಾವಿರ ರೂಪಾಯಿಗಳನ್ನು ಪರಿಹಾರವನ್ನಾಗಿ ಕಾರ್ಪೊರೇಷನ್‌ನವರು ಕೊಟ್ಟಿದ್ದಾರೆ. ನಗರದಲ್ಲಿ ಮಳೆಯಿಂದಾಗಿ ಉಂಟಾಗಿರತಕ್ಕಂಥ ಹಾನಿ ಸುಮಾರು 10 ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ಇದಕ್ಕೆ ಮೂಲವಾದಂತಹ ಕಾರಣವನ್ನು ಕಂಡು ಹಿಡಿದು ದೊಡ್ಡ ಮೋರಿಗಳನ್ನು ರೀ-ಮಾಡಲ್ ಮಾಡತಕ್ಕಂಥ ಕೆಲಸ ನಡೆಯುತ್ತಿದೆ. ಸ್ವಾರ್ಮ್ ವಾಟರ್ ಡ್ರೈನ್ಸ್‌ನಲ್ಲಿ ಹೂಳು ತುಂಬಿ ಹೋಗಿತ್ತು. ಆ ಹೂಳನ್ನು ಎತ್ತತಕ್ಕಂಥ ಕಾರ್ಯವನ್ನು ಬಹಳ ರಭಸವಾಗಿ ಇತ್ತೀಚಿನ ದಿನಗಳಲ್ಲಿ ಕೈಗೊಳ್ಳಲಾಗಿದೆ. ಯಾವ ಕಮೀಷನರ್‌ಗಳು ಬಂದರೂ ಕೂಡ, ಹಿಂದಿನವರು ಏನು ಉಳಿಸಿದ್ದಾರೋ ಆ ಕಾರ್ಯವನ್ನೇ ಅವರು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೇ, ಪ್ರಕೃತಿ ವಿಕೋಪದಿಂದ ಹಾನಿಗೆ ಒಳಗಾಗಿರುವ ಬೇರೆ ಜನರಿಗೆ ತಾವು 1 ಲಕ್ಷ ರೂಪಾಯಿಗಳ ಪರಿಹಾರ - ಕೊಟ್ಟಿದ್ದೀರಿ. ಆದರೆ ತಾವು ಇಲ್ಲಿ ಕೇವಲ 50 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಈ ಮಾತನ್ನು ನಾನು ಏತಕ್ಕಾಗಿ ಕೇಳಿದೆ ಎಂದರೆ, ಹೊಸದಾಗಿ ಕಮೀಷನರ್‌ಗಳು ಬಂದಾಗಲೆಲ್ಲಾ ನೂರು ಕೋಟಿ ರೂಪಾಯಿಗಳು ಮಂಜೂರಾಗಿದೆ. ಹುಡ್ಕೋದಿಂದ ಹಣವನ್ನು ತಂದಿದ್ದೇವೆ, ನಾವು ಕೆಲಸ ಮಾಡುತ್ತೇವೆ ಎಂದು ಹೇಳುತ್ತಿದ್ದರೂ ಇಲ್ಲಿಯತನಕ ಆ ಕೆಲಸವನ್ನು ಅನುಷ್ಠಾನಕ್ಕೆ ತರಲಿಕ್ಕೆ ಆಗಲಿಲ್ಲ, ಆದ್ದರಿಂದ ನಾನು ಇಲ್ಲಿ ಈ ರೀತಿಯಾಗಿ ಪ್ರಶ್ನಿಸಬೇಕಾಯಿತು. ಈಗಾಗಲೇ ಮೂರು ವರ್ಷವಾಗಿದೆ. ಆ 100 ಕೋಟಿ ರೂಪಾಯಿಗಳು ಎಲ್ಲಿದೆ? ಅದನ್ನು ಖರ್ಚು ಮಾಡುತ್ತಾರೋ ಇಲ್ವೋ ಎಂಬ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಎರಡನೆಯದಾಗಿ, ಈ ಮಳೆ ನೀರು ಸಂಗ್ರಹ ಮಾಡುವುದರ ಬಗ್ಗೆ ಸರ್ಕಾರದಿಂದ ಒಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಎಂಬುದು ನನ್ನ ಗಮನಕ್ಕೆ ಬಂದಿದೆ ಈಗಾಗಲೇ ಚೆನ್ನೈ, ಹೈದರಬಾದ್ ಮತ್ತು ದೆಹಲಿಗಳಲ್ಲಿ ಮಳೆಯ ನೀರನ್ನು ಸಂಗ್ರಹ ಮಾಡಿ ಆ ನೀರನ್ನು ಮತ್ತೆ ಬೋರ್‌ವೆಲ್‌ಗಳಿಗೆ ಬಿಟ್ಟು ನೀರನ್ನು ಮತ್ತೆ ಉಪಯೋಗಿಸುವಂತಹ ಒಂದು ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದಾರೆ. ಇದನ್ನು ತಾವು ಯಾವಾಗ ಜಾರಿಗೆ ತರುತ್ತೀರಿ ಎಂಬ ಮಾತನ್ನು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ದೊಡ್ಡ ಮೋರಿಗಳ ರೀಮಾಡಲಿಂಗ್ ಯೋಜನೆ ತಯಾರಿಕೆ ನಡೆಯುತ್ತಿದೆ. ಸ್ಟಡಿ ಕನ್ಸ್‌ಲ್‌ಟೆಂಟ್ಸ್‌ಗೆ ಈ ಕೆಲಸವನ್ನು ನಾವು ವಹಿಸಿದ್ದೇವೆ. ಇದರ ಒಟ್ಟು ಅಂದಾಜು 180 ಕೋಟಿ ರೂಪಾಯಿಗಳಾಗಿದೆ. ಮೂರು ವರ್ಷದಲ್ಲಿ ಈ ಕೆಲಸವನ್ನು ಮುಗಿಸಲು ನಾವು ಏರ್ಪಾಡುಗಳನ್ನು ಮಾಡುತ್ತಿದ್ದೇವೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷ ಮಹಾನಗರ ಪಾಲಿಕೆ ಮೋರಿಗಳಲ್ಲಿ ತುಂಬಿರುವಂತಹ ಹೂಳನ್ನು ತೆಗೆಯಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಮುಂದಿನ ವರ್ಷ ಮತ್ತೆ ಸಿಲ್ಟ್ ತುಂಬಿಕೊಂಡಿರುವುದನ್ನು ತೆಗೆಯಲು ಮತ್ತೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತಲೇ ಇರುತ್ತದೆ. ಇದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಹಿಂದೆ ಮುಖ್ಯಮಂತ್ರಿಗಳನ್ನು ಈಜಿಪುರ, ಕೋರಮಂಗಲ, ಮುಂತಾದ ಬೆಂಗಳೂರು ಪೂರ್ವ ಭಾಗಗಳಲ್ಲಿ ಬರತಕ್ಕಂಥ ಏರಿಯಾಗಳ ಮೋರಿಗಳಲ್ಲಿ ತುಂಬಿರುವ ಸಿಲ್ಟ್‌ಗಳ ಬಗ್ಗೆ ನಾನು ಪ್ರಶ್ನೆಯೊಂದನ್ನು ಕೇಳಿದ್ದಾಗ, ಮಾನ್ಯ ಮುಖ್ಯಮಂತ್ರಿಗಳು ಬೆಳ್ಳಂದೂರು ಕೆರೆಯಲ್ಲಿ ಸಿಲ್ಟ್ ತುಂಬಿಕೊಂಡು, ಅದು ನೀರನ್ನು ಕ್ಯಾಚ್ ಮಾಡುತ್ತಿಲ್ಲ ಅದೇ ರೀತಿ ಎಲ್ಲಾ ಕಡೆ ಮತ್ತೆ ಮತ್ತೆ ಸಿಲ್ಟ್ ತುಂಬಿಕೊಳ್ಳುತ್ತಿದೆ, ಅದಕ್ಕೆ ಶಾಶ್ವತ ಪರಿಹಾರವನ್ನು ಮಾಡುತ್ತೇವೆ ಎಂದು ಹೇಳಿದ್ದರು. ಹೋದ ವರ್ಷ ಮಾನ್ಯ ಮುಖ್ಯಮಂತ್ರಿಗಳು ನೀಡಿದ ಭರವಸೆ ಈಡೇರಿಲ್ಲ. ಈ ವರ್ಷವಾದರೂ ಅದಕ್ಕೆ ಶಾಶ್ವತ ಪರಿಹಾರ ಮಾಡಬೇಕು. ಪ್ರತಿ ವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದರಿಂದ ಈ ಪ್ರಾಬ್ಲಮ್ ಸಾಲ್ವ್ ಆಗುವುದಿಲ್ಲ. ಶಾಶ್ವತ ಪರಿಹಾರ ಒದಗಿಸುವ ಪ್ರಯತ್ನವನ್ನು ತಾವು ಮಾಡುತ್ತೀರಾ ಎಂಬ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಈ ರೀತಿ ಮೋರಿಯಲ್ಲಿ ಸಿಲ್ಟ್ ತುಂಬಿಕೊಂಡು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜೆ.ಪಿ. ನಗರದಲ್ಲಿ ಅಮಾಯಕ ಕುಟುಂಬದ ಸಾಫ್ಟ್‌ವೇರ್ ಇಂಜಿನಿಯರ್, ಅವನ ಹೆಂಡತಿ ಮತ್ತು ಮಕ್ಕಳು ರಸ್ತೆ ಎಂದು ಭಾವಿಸಿ ಮೋರಿಯಲ್ಲಿ ಡ್ರೈವ್ ಮಾಡಿ ಬಿದ್ದು ಮೃತರಾದರು. ಕಾರ್ಪೋರೇಷನ್‌ನವರು ಕೆಲವು ಭಾಗಕ್ಕೆ ಸ್ಲಾಬ್ ಕಟ್ಟಿ ಉಳಿದ ಭಾಗ ಬಿಟ್ಟಿದ್ದರು. ಕಾರ್ಪೋರೇಷನ್‌ನ ಈ ತಪ್ಪಿನಿಂದ ಅವರು ಹೋಗಿ ಬೀಳುವಂತಾಯಿತು. ಅಲ್ಲಿ ಡಕ್ ಹಾಕಿದ್ದಾರೆ ಎಂದು ತಿಳಿದುಕೊಂಡು, ಆ ಡಕ್ ಮೇಲೆ ಪ್ರಯಾಣ ಮಾಡಿದಾಗ, ಮುಂದೆ ಅದು ಹಳ್ಳವಾಗಿ ಪರಿವರ್ತನೆಯಾಗಿ ಅವರು ಬಿದ್ದಿದ್ದಾರೆ. ಕಾರ್ಪೋರೇಷನ್ ತಪ್ಪಿನಿಂದ ಈ ಘಟನೆ ಸಂಭವಿಸಿದೆ. ಈ ರೀತಿ ಕಾರ್ಪೋರೇಷನ್ ಮಾಡಿರುವ ತಪ್ಪನ್ನು ಸರಿಪಡಿಸಿ, ಸಿಲ್ಟ್‌ನ ಶಾಶ್ವತ ಪರಿಹಾರಕ್ಕೆ ಏನಾದರೂ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಾ ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ಮುಂಬೈ, ದೆಹಲಿ, ಚೆನ್ನೈ, ಬೆಂಗಳೂರು ಮೂಂತಾದ ಪ್ರತಿಯೊಂದು ನಗರಗಳಲ್ಲೂ ಕೂಡ ಈ ಬೆಳವಣಿಗೆಗಳು ಸ್ವಾಭಾವಿಕವಾಗಿ ಇರುತ್ತವೆ. ಕಾರ್ಪೋರೇಷನ್‌ಗಳು ಇನ್ನು ಹೆಚ್ಚಿನ ರೀತಿಯಲ್ಲಿ ಇದರ ಬಗ್ಗೆ ತಮ್ಮ ಗಮನವನ್ನು ಹರಿಸಬೇಕಾಗಿರತಕ್ಕದ್ದು, ಅದರಲ್ಲೂ ಮಳೆಗಾಲದಲ್ಲಿ, ಅತಿ ಅವಶ್ಯಕ. ಮಾನ್ಯಶಾಸನ ಸಭಾ ಸದಸ್ಯರುಗಳು ಕಾರ್ಪೋರೇಷನ್‌ನ ಸದಸ್ಯರೂ ಸಹಾ ಆಗಿದ್ದಾರೆ. ಅಲ್ಲಿಯೂ ಕೂಡ ಅವರು ಸಭೆಗಳಲ್ಲಿ ಭಾಗವಹಿಸತಕ್ಕಂಥ ಅವಕಾಶ ಇದೆ. ಕಾರ್ಪೋರೇಷನ್ ಸಭೆಗಳಲ್ಲಿ ಇವುಗಳ ಫಾಲೋ-ಆಫ್ ಆಕ್ಷನ್ ಬಗ್ಗೆ ತಾವು ಹೆಚ್ಚು ಗಮನ ಕೊಡಬೇಕು, ಅಲ್ಲಿ ತಾವು ತಮ್ಮ

ಪ್ರಭಾವವವನ್ನು ಬೀರತಕ್ಕಂಥದ್ದು ಅವಶ್ಯಕ. ಒಂದು ನತದೃಷ್ಟ ಸಂಸಾರದ ಮೂರು ಜನ ನಗರದಲ್ಲಿ ಬಿದ್ದ ಭಾರೀ ಮಳೆ ನೀರಿನಿಂದಾಗಿ ಮೃತರಾಗಿರುವಂತಹ ದುರದೃಷ್ಟಕರವಾದಂತಹ ಘಟನೆ ನನ್ನ ಗಮನಕ್ಕೂ ಸಹಾ ಬಂದಿದೆ. ಇಂತಹ ಬೆಳವಣಿಗೆಗಳನ್ನು ನಾವು ತಡೆಹಿಡಿಯಬೇಕಾಗುತ್ತದೆ. ಇದಕ್ಕೋಸ್ಕರ 180 ಕೋಟಿ ರೂಪಾಯಿಗಳ ಈ ಪ್ಲಾನನ್ನು ನಾವು ಜಾರಿಗೆ ತರಲಿಕ್ಕೆ ಕನ್ಸಲ್‌ಟೆಂಟ್ಸ್ ಅಪಾಯಿಂಟ್ ಮಾಡಿ, ಅವರ ಮೂಲಕ ಈ ಕೆಲಸ ಮಾಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ವರ್ಷ, ಈ ಮಳೆ ಬಿದ್ದಾದ ಮೇಲೆ, ಇಂತಹ ಘಟನೆಗಳಾದ ಮೇಲೆ ನಗರಾದ್ಯಂತ ಇರುವ ಮೋರಿಗಳ ಹೂಳನ್ನು ಸಮಗ್ರವಾಗಿ ತೆಗೆಸಿದ್ದೇವೆ. ಬೆಳ್ಳಂದೂರು ಕೆರೆಗೆ ಹೋಗುವ ದೊಡ್ಡ ಮೋರಿಯನ್ನು ವಿಸ್ತರಣೆ ಮಾಡಿದ್ದೇವೆ. ಈಗ ಬಹಳ ಮಟ್ಟಿಗೆ ಈ ಸಮಸ್ಯೆ ಪರಿಹಾರವಾಗಿದೆ ಎಂದು ಹೇಳಲಿಕ್ಕೆ ಬರದಿದ್ದರೂ ಈ ಸಮಸ್ಯೆ ಮೇಲೆ ಸಾಕಷ್ಟು ನಿಯಂತ್ರಣ ಹಾಕಲಿಕ್ಕೆ ಸಾಧ್ಯವಾಗುತ್ತಿದೆ. ಈ ಬಗ್ಗೆ ತಾವು ಸಲಹೆಗಳೇನಾದರೂ ಕೊಟ್ಟರೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ, ಮೂರು ಜನ ತೀರಿ ಹೋದ ಈ ಘಟನೆಯನ್ನು ತಾವಾದರೂ ಸಹ ದುರದೃಷ್ಟಕರವಾದ ಘಟನೆ ಎಂದು ಹೇಳಿದ್ದೀರಿ.

11.30 ಎ.ಎಂ

ಆದರೆ ಒಬ್ಬ ಸಚಿವರು ಒಂದೇ ಕುಟುಂಬದ ಮೂರು ಜನರು ಕೊಚ್ಚಿಕೊಂಡು ಹೋದ ಹೃದಯ ಕಲುಕುವ ಒಂದು ಸನ್ನಿವೇಶದ ಸುದ್ದಿಯನ್ನು It is not a tragedy, It is an Incident ಎಂದು ತಮ್ಮದೇ ಆದ ಶೈಲಿಯಲ್ಲಿ ಅವರು ಹೇಳಿದರು. ಪ್ರಾಯಶಃ ಇಡೀ ಬೆಂಗಳೂರಿನ ನಾಗರೀಕರ ಮನಸ್ಸಿಗೆ ಕೋಪ ಬರುವ ಹಾಗೆ ಮಾಡಿದರು. ಮಳೆ ನಿಂತ ಮೇಲೆ ಆ ಕೆಲಸ ಮಾಡುತ್ತೇವೆಂದು ಹೇಳಿದಿರಿ. ಹೂಳು ತುಂಬುವುದು, ಸ್ವಾರಂ ವಾಟರ್ ಡ್ರೈನ್‌ನಿಂದ ನೀರು ಆಚೆ ಬಂದು ತಗ್ಗಿನ ಪ್ರದೇಶಗಳಿಗೆ ಹೋಗುವುದು, ಇದು ಯಾವುದೂ ಕೂಡ ಹೊಸ ಸಂಗತಿ ಅಲ್ಲ. ಪ್ರತಿ ವರ್ಷ ನಡೆದುಕೊಂಡು ಬಂದಿದೆ. ವಾರ್ಷಿಕ ಶ್ರಾದ್ಧ ತರಹ ನಡೆದುಕೊಂಡು ಬಂದಿದೆ. ಪ್ರತಿ ವರ್ಷ ಒಂದೆರಡು ಸಾವು ಆಗುತ್ತವೆ. ಒಂದು ರೀಆ್ಯಕ್ಷನ್ ತಕ್ಷಣ ಒಂದು ಪೋಸ್ಟ್‌ಮಾರ್ಟ್‌ಂ ಇದೊಂದೇ ಕೆಲಸ. ನಾನು ಸರ್ಕಾರಕ್ಕೆ ಕೇಳುವುದು, ಮಳೆ ಬರುತ್ತದೆ ಎಂದು ಗೊತ್ತಿದ್ದಾಗ ಫೆಬ್ರವರಿ ಮಾರ್ಚ್‌ನಿಂದ ಈ ಕೆಲಸ ಮಾಡುವುದಕ್ಕೆ ಏಕೆ ಪ್ರಾರಂಭ ಮಾಡುವುದಿಲ್ಲ? ಮೋರಿಯಿಂದ ಹೂಳು ತೆಗೆಯುವುದಕ್ಕೋಸ್ಕರ ಈ ಕೆಲಸ ಕಾರ್ಪೊರೇಷನ್‌ನವರು ಮಾಡುತ್ತಾರೋ? ಅಥವಾ ಗುತ್ತಿಗೆದಾರರಿಗೆ ಕೆಲಸ ಕೊಡುವುದಕ್ಕೋಸ್ಕರ ಮಾಡುತ್ತಾರಾ? ಸರ್ಕಾರ ನಗರ ಪಾಲಿಕೆಗೆ ಒಂದು ಸೂಚನೆ ಕೊಟ್ಟು ಪ್ರತಿ ವರ್ಷ ಫೆಬ್ರವರಿಯಿಂದ ಏಪ್ರಿಲ್ ಮೇ ವರೆಗೆ ಏನಿದೆ ಮಳೆಗಾಲದ ಮುಂಚಿನ ಸಮಯ ಆಗ ಸಮರೋಪಾದಿಯಾಗಿ ಈ ಕೆಲಸ ಮಾಡಬೇಕು. ಅನಾಹುತ ಬಂದ ಮೇಲೆ ಎಚ್ಚರವಾಗುವುದಕ್ಕಿಂತ ಅನಾಹುತ ಎಲ್ಲೆಲ್ಲಿ ಆಗುತ್ತದೆ ಎಂದು ಗೊತ್ತಿರುವುದರಿಂದ ಮುಂಚಿತವಾಗಿ ಎಚ್ಚರಿಕೆ ತೆಗೆದುಕೊಂಡು ಕೆಲಸ ಮಾಡಬೇಕು ನನ್ನ ವಿನ್ನಹವನ್ನು ಮಂಡಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ: ಮಾನ್ಯ ಸದಸ್ಯರು ತಮ್ಮ ಅನುಭವದ ಆಧಾರದ ಮೇಲೆ ಸಲಹೆ ಮಾಡಿದ್ದಾರೆ. ಅವರ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ. ಮಳೆಗಾಲ ಪ್ರಾರಂಭವಾಗುವುದಕ್ಕೆ ಮುನ್ನ ಈ ಮೋರಿಗಳಲ್ಲಿ ಹೂಳೆತ್ತತಕ್ಕಂತಹ ಕಾರ್ಯಕ್ರಮವನ್ನು ಕೈಗೆತ್ತಿಕೊಂಡರೆ ಮಳೆಯಿಂದ ಆಗತಕ್ಕಂತಹ ದುಷ್ಪರಿಣಾಮ ತಕ್ಕಟ್ಟಿಗೆ ತಡೆಹಿಡಿಯಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂತಹ ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಕೇಳುವುದು ಇಷ್ಟೆ. ಹೊಳೆತ್ತುವ ಕಾರ್ಯಕ್ರಮ ಕಾರ್ಪೋರೇಷನ್ ವತಿಯಿಂದ ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಆದರೆ ಅದರ ಜೊತೆ ಜೊತೆಗೆ ದೊಡ್ಡ ಡ್ರೈನ್ ಏನಿರುತ್ತದೆ ಅದಕ್ಕೆ ಅಟಾಚ್ ಆಗತಕ್ಕಂತಹ ಸೈಡ್ ಡ್ರೈನ್ ಇರುತ್ತದೆ. ಆ ಸೈಡ್ ಡ್ರೈನ್‌ನಿಂದ ಅನೇಕ ಮನೆಗಳಿಗೆ ನೀರು ರಿವರ್ಸ್ ಆಗುವುದರಿಂದ ಆ ಬಡಾವಣೆಗಳ ಸಮಸ್ಯೆ ಜಾಸ್ತಿಯಾಗುತ್ತಿದೆ. ಈ ಸೈಡ್ ಡ್ರೈನ್ ಏನಿರುತ್ತದೆ ಇದಕ್ಕೆ ಅಟ್ಯಾಚ್ ಆಗುವ ಡ್ರೈನ್ ಏನಿರುತ್ತದೆ. ಅದನ್ನು ಕೂಡ ಈ ಒಂದು ಹೊಳೆಯತ್ತುವ ಕಾರ್ಯಕ್ರಮದಲ್ಲಿ ಸೇರಿಸಿಕೊಂಡು ಮಾಡುವುದು ಬಹಳ ಅವಶ್ಯಕತೆ ಇರುತ್ತದೆ. ಅದರ ಜೊತೆಯಲ್ಲಿ ಈ ಒಂದು ಹೊಳೆತ್ತುವ ಕಾರ್ಯಕ್ರಮ ಮಾಡುವ ಸಂದರ್ಭದಲ್ಲಿ ಸ್ಯಾನಿಟರಿ ಲೈನ್‌ಗಳಿರುತ್ತವೆ. ಅವುಗಳ ಕೆಲಸ ಮಾಡುವ ಸಂದರ್ಭದಲ್ಲಿ ಒಡೆದು ಹೋಗಿರುತ್ತದೆ. ಪೈಪ್ ಹೊಡೆದು ಹೋಗಿ ಸ್ಯಾನಿಟರಿ ಲೀಕೇಜಾಗಿ ಡ್ರೈನ್‌ಗಳಲ್ಲಿ ಒಂದು ಬಡಾವಣೆಯಲ್ಲಿ ಬಹಳಷ್ಟು ಕೆಟ್ಟ ವಾತಾವರಣ ನಿರ್ಮಾಣವಾಗುತ್ತದೆ. ತಕ್ಷಣವೇ ಅದು ರಿಪೇರಿಯಾಗುವ ಕೆಲಸ ಆಗಬೇಕು. ಮಳೆ ಬಂದಾಗ ಸ್ಲಂ ಪ್ರದೇಶದ ಮನೆಗಳು ಬಹಳಷ್ಟು ಹಾಳಾಗತಕ್ಕಂತಹ ನಷ್ಟವಾಗತಕ್ಕಂಥ ವಾತಾವರಣ ಇರುತ್ತದೆ. ಪರಿಹಾರ ಕೊಡುವಂತಹ ಸಂದರ್ಭದಲ್ಲಿ ನಾವು ಕಾರ್ಪೋರೇಷನ್‌ಗೆ ಪರಿಹಾರ ಕೊಡಿ ಎಂದು ಕೇಳಿದಾಗ 500 ರೂ ರಿಂದ ಸಾವಿರ ರೂಪಾಯಿ ಕೊಡುತ್ತಾರೆ. ಅದನ್ನು ಕೂಡ ಮೂರರಿಂದ ನಾಲ್ಕು ತಿಂಗಳ ನಂತರ ಕೊಡುತ್ತಾರೆ. ಇಂಥ ಸಮಯದಲ್ಲಿ ತಕ್ಷ 4-5 ಸಾವಿರ ರೂಪಾಯಿ ಕೊಟ್ಟರೆ ಅವರಿಗೆ ಏನಾದರು ಉಪಯೋಗವಾಗುತ್ತದೆ. ಕೇವಲ 500 ರೂಪಾಯಿ ಸಾವಿರ ರೂಪಾಯಿ ಕೊಡತಕ್ಕಂತಹ ಸ್ಲಂ ಪ್ರದೇಶದ ಮನೆಗಳಿಗೆ ಯಾವುದೇ ರೀತಿಯಲ್ಲಿ ಪ್ರಯೋಜನವಾಗುವುದಿಲ್ಲ. ಮತ್ತು ಪ್ರೊಸೆಸ್ ಕೂಡ ಬಹಳ ತಡವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕಾರ್ಪೋರೇಷನ್ ಅಧಿಕಾರಿಗಳಿಗೆ ಮಳೆಗಾಲದಲ್ಲಿ ಬಡವರ ಮನೆಗಳು ಹಾಳಾದಾಗ ತಕ್ಷಣ ಏನಾದರೂ ಒಳ್ಳೆಯ ರೀತಿಯಲ್ಲಿ ಪರಿಹಾರ ಕೊಡುವುದು ಆಗಬೇಕೆಂದು ನಿರ್ದೇಶನ ಕೊಡಬೇಕು. ಮಳೆ ನೀರಿನ ಸಂಗ್ರಹಣೆ ವಿಚಾರದಲ್ಲಿ ದೆಹಲಿಯಲ್ಲಿ ಮತ್ತು ಬೇರೆ ಬೇರೆ ಮೆಟ್ರೋ ಪಾಲಿಟನ್ ಸಿಟಿಗಳಲ್ಲಿ ಇದರ ಬಗ್ಗೆ ಬಹಳಷ್ಟು ಚರ್ಚೆಯಾಗಿ ಕೆಲಸ ಮಾಡಬೇಕೆಂದು ಮುಂದೆ ಬರುತ್ತಿದ್ದಾರೆ. ಬೆಂಗಳೂರಿನಲ್ಲಿ ಕೂಡ ಹೆಚ್ಚಿನ ಅವಶ್ಯಕತೆ ಇದೆ. ನನ್ನ ಸಲಹೆ ಏನೆಂದರೆ, ಯಾವುದೇ ಹೌಸಿಂಗ್ ಸೊಸೈಟಿ ಮತ್ತು ದೊಡ್ಡ ದೊಡ್ಡ ಲೇಔಟ್‌ಗಳನ್ನು ಮಾಡುತ್ತಿದ್ದಾರೆ. ಅದನ್ನು ಕಂಪಲ್ಸರಿ ಮಾಡುವ ಕೆಲಸ ಮಾಡಬೇಕು. ರೈನ್‌ವಾಟರ್ ಹಾರ್ವೆಸ್ಟಿಂಗ್ ಪ್ರೋಗ್ರಾಮ್ಸ್ ಪ್ರಕಾರ ಆ ಬಡಾವಣೆಯಲ್ಲಿ ಯಾರು ಲೇಔಟ್ ಮಾಡುತ್ತಾರೆ ಅವರು ಅದನ್ನು ಅಳವಡಿಸಿಕೊಂಡು ಮಾಡಬೇಕು. ಆ ರೀತಿ ಮಾಡಿದಾಗ ಮಾತ್ರ ನಮ್ಮ ಹೊಸ ಬೆಂಗಳೂರು ಸುತ್ತ ಮುತ್ತಲಿರುವ ಪ್ರದೇಶಗಳಿಗೆ ಮಾಡುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು: ಈಗ ಸಪ್ಲಿಮೆಂಟರಿ ಕೇಳದೆ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಬಂದಾಗ ಮಾತನಾಡಿ ಸಲಹೆ ಮಾಡಿ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಮಂತ್ರಿಗಳ ಪ್ರಶ್ನೆಯಲ್ಲಿ ಮಳೆ ನೀರಿನ ಸಂಗ್ರಹಣೆ ಬಗ್ಗೆ ಇರುವುದರಿಂದ ನಾನು ಸಲಹೆ ಕೊಡುತ್ತಿದ್ದೇನೆ. ಆದಷ್ಟು ಬೇಗ ಈ ವರ್ಷದಲ್ಲಿ ಇದರ ಒಂದು ಪ್ರೂಪ್ ಅನ್ನು ಮಾಡಿ ಇದನ್ನು ಕಾನೂನು ರೀತಿಯಲ್ಲಿ ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಮತ್ತೆ ಮತ್ತೆ ಚರಂಡಿಗಳನ್ನು ನವೀಕರಿಸಬೇಕೆನ್ನತಕ್ಕಂತಹ ಸೂಚನೆ ಬರುತ್ತಿದೆ. ಮೂಲಭೂತವಾಗಿ ಬೆಂಗಳೂರು ನಗರದ ಹತ್ತಾರು ಸಮಸ್ಯೆಗಳಿಗೆ ಅದು ಕಾರಣವಾಗಿದೆ. ಆ ಕಾರಣಕ್ಕಾಗಿ 180 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದಾರೆ. ಸರ್ಕಾರದಿಂದ ಇದಕ್ಕೆ ಎಮ್‌ಒಯು ಮಾಡಿಕೊಂಡಿದ್ದೇವೆ. ಆ ಅಂಡರ್‌ಸ್ಟ್ಯಾಂಡಿಂಗ್ ಅಡಿಯಲ್ಲಿ 110 ಕೋಟಿ ರೂಪಾಯಿಗಳನ್ನು ಸರ್ಕಾರದವರು ಕೊಡುವುದಕ್ಕೆ ಒಪ್ಪಿದ್ದೇವೆ. ತಾವು ರೈನ್ ವಾಟರ್ ಹಾರ್ವೇಸ್ಟಿಂಗ್ ವಿಚಾರ ಪ್ರಸ್ತಾಪ ಮಾಡಿದ್ದೀರಿ, ಇದು ಅತ್ಯಂತ ಪ್ರಾಮುಖ್ಯವಾಗಿ ಆಗಲೇ ಬೇಕಾಗಿರತಕ್ಕಂತಹ ಒಂದು ಸಮಗ್ರ ಸುಧಾರಣೆ. ಈ ಸುಧಾರಣೆಯನ್ನು ನಾವು ಬೆಂಗಳೂರು ಕಾರ್ಪೊರೇಷನ್‌ನವರು ಇದಕ್ಕೆ ತಮ್ಮ ಕೇಂದ್ರೀಕೃತ ಗಮನವನ್ನು ಕೊಟ್ಟು ಹೊಸದಾಗಿ ಯಾರು ಮನೆಗಳನ್ನು ಕಟ್ಟುತ್ತಾರೆ, ಹೊಸದಾಗಿ ಯಾರು ಮತ್ತೊಂದು ಕೆಲಸವನ್ನು ಪ್ರಾರಂಭ ಮಾಡುತ್ತಾರೆ, ಅವರೆಲ್ಲರೂ ಕೂಡ ಇದನ್ನು ಕಡ್ಡಾಯವಾಗಿ ಮಾಡಬೇಕೆಂದು ನಮ್ಮ ಬೈಲಾಗಳಲ್ಲಿ ತಿದ್ದುಪಡಿ ತರುವುದಕ್ಕೆ ನಾವು ನಿರ್ಧಾರ ಮಾಡಿದ್ದೇವೆ. ಈ ತಿದ್ದುಪಡಿ ಬಂದಮೇಲೆ ಈ ರೈನ್ ವಾಟರ್ ಹಾರ್ವಸ್ಟಿಂಗ್ ಅದು ಕಡ್ಡಾಯವಾಗುತ್ತದೆ. ಅದರಿಂದ ನಮ್ಮ ಈ ರೈನ್‌ವಾಟರ್ ಹಾರ್ವೇಸ್ಟಿಂಗ್ ಅದು ಕಡ್ಡಾಯವಾಗುತ್ತದೆ. ಅದರಿಂದ ನಮ್ಮ ಬೆಂಗಳೂರಿನ ಕ್ವಾಲಿಟಿ ಆಫ್ ಲೈಫ್ ಏನಿದೆ, ಅದು ಪೂರ್ಣಾಂಶವಾಗಿ ಉತ್ತಮವಾಗಬಹುದು ಎಂದು ಮಾನ್ಯ ಸದಸ್ಯರ ಕಳಕಳಿ ಏನಿದೆ ಆ ಕಳಕಳಿಗೆ ನಾನು ಸ್ಪಂದಿಸುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ವಿಚಾರದಲ್ಲಿ ನಾನು ಈ ಸಂದರ್ಭದಲ್ಲಿ ಇದನ್ನು ಉಪಯೋಗಿಸಿಕೊಂಡು ತಮ್ಮ ಅನುಮತಿ ಕೋರಿ ಒಂದು ಮಾತನ್ನು ಹೇಳುತ್ತೇನೆ. ಮೊನ್ನೆ ಬೆಂಗಳೂರಿನಲ್ಲಿ ಬಿದ್ದಂತಹ ಅಸಾಧಾರಣ ಮಳೆ ಸಂದರ್ಭದಲ್ಲಿ 5 ಜನ ಸಾವಿಗೀಡಾಗಿದ್ದಾರೆ ಅದರಲ್ಲಿ ಮೂರು ಜನ ಸತ್ತಂತಹ ಘಟನೆ ನಡೆದುದ್ದು ನನ್ನ ಮನೆಯ ಪಕ್ಕದಲ್ಲಿ ಆ ದಿವಸ ಸಿಪಿಎಂ ಪಾರ್ಟಿಯವರು ಎಲ್ಲರೂ ಇದ್ದರು, ನಾನು ಸಹ ರಾತ್ರಿ ಒಂದು ಭೋಜನ ಕೂಟ ಏರ್ಪಾಡು ಮಾಡಿದ್ದೆ, ಅದನ್ನು ಮುಗಿಸಿಕೊಂಡು ಮನೆಗೆ ಹೋದಾಗ 10-30 11.00 ಗಂಟೆ. ರಾತ್ರಿ 10-30 ರಿಂದ ಒಂದು ಗಂಟೆ ಒಳಗೆ ಇದು ಆಗಿದೆ. ಒಬ್ಬ ಜನ ಪ್ರತಿನಿಧಿಯಾಗಿ ಇದ್ದು ನನ್ನ ಮನೆಯ ಪಕ್ಕದಲ್ಲಿರತಕ್ಕಂತಹ ಮೋರಿಗೆ ಅಡ್ಡಗೋಡೆ ಹಾಕಿಸುವುದರಲ್ಲಿ ನಾನು ವಿಫಲನಾಗಿದ್ದೇನೆ. ಇದು ಮೊದಲನೇ ವಿಚಾರ. ನನಗೂ ಸಹ ಈ ಹೃದಯ ವಿದ್ರಾವಕ ಘಟನೆಯನ್ನು ನೆನಪಿಸಿಕೊಂಡಾಗಲೆಲ್ಲಾ ಮನಸ್ಸಿಗೆ ಬಹಳ ನೋವಾಗುತ್ತದೆ. ನನ್ನದೂ ಕೂಡ ಮಾರಲ್ ರೆಸ್ಪಾನ್ಸಿಬಿಲಿಟಿ ಇತ್ತು. ನಾನು ಅದರಲ್ಲಿ ಫೇಲಾಗಿದ್ದೇನೆ. ಇನ್‌ಡೈರೆಕ್ಟಾಗಿ ಎಲ್ಲೋ ಒಂದು ಕಡೆ ನಾನೂ ಕೂಡ ಅವರ ಸಾವಿಗೆ ಕಾರಣವೆಂದು ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ

ನೋವು ಉಳಿಯುವ ಘಟನೆಯಾಗಿದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ರಾತ್ರಿ ಒಂದು ಗಂಟೆಗೆ ನನ್ನ ಕಾರಿನಿಂದ ಇಳಿದು ಮನೆಗೆ ಹೋಗಬೇಕಾದರೆ ಎರಡು ಅಡಿ ನೀರಿನಲ್ಲಿ ಮನೆಗೆ ಹೋಗತಕ್ಕಂತಹ ಸಂದರ್ಭ ಬಂದಿತ್ತು. ಇಡೀ ಪ್ರದೇಶ ಹಾಗೆಯೇ ಇದೆ. ನನಗೆ ಅದರ ನೋವು ಶಾಶ್ವತವಾಗಿ ಜೀವನದಲ್ಲಿ ಉಳಿಯುವ ಹಾಗಾಗಿದೆ. ನಾನು ದೇವರಿಗೆ ಉತ್ತರ ಕೊಡಬೇಕಾಗಿದೆ. ಒಬ್ಬ ಜನ ಪ್ರತಿನಿಧಿಯಾಗಿ ನಾನು ಅದನ್ನು ಮಾಡಿಸಬೇಕಾಗಿತ್ತು, ಅದರಲ್ಲಿ ನಾನು ವಿಫಲನಾಗಿದ್ದೇನೆ. ಅದಕ್ಕೆ ನಾನು ಏನು ಪ್ರಾಯಶ್ಚಿತ್ತಗೊಳಿಸಬೇಕೆಂದು ನನಗೆ ಗೊತ್ತಿಲ್ಲ. ನಾನು ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈ ರೀತಿ ದೊಡ್ಡ ಮೋರಿಗಳಿಗೆ ಅಡ್ಡ ಗೋಡೆಗಳನ್ನು ಹಾಕುವುದು ಬಹಳಷ್ಟು ಕಡೆ ಅವಶ್ಯಕವಿದೆ. ಮೋಟಾರ್ ಬೈಕ್‌ಗಳಲ್ಲಿ ಬಹಳ ವೇಗವಾಗಿ ಹೋಗುತ್ತಾರೆ, ಹೋದ ತಕ್ಷಣ ಡೆಡ್ ಎಂಡ್ ಆಗುತ್ತದೆ. ನಮ್ಮ ಡಾ।। ಜೀವರಾಜ್ ಆಳ್ವರವರ ಮನೆಯ ಪಕ್ಕದಲ್ಲಿ ಕೂಡ ಇದೇ ರೀತಿ ಒಂದು ಮೋರಿ ಇದೆ ಅದು ಡೆಡ್ ಎಂಡ್ ಆಗಿದೆ. ಅಲ್ಲಿ ತಕ್ಷಣ ಅನೇಕ ಜನ ಬಿದ್ದು ಸತ್ತಿರತಕ್ಕಂತಹ ಘಟನೆಗಳನ್ನು ನಾವು ನೋಡಿದ್ದೇವೆ. ಇದು ಆದ ತಕ್ಷಣ ಮಾನ್ಯ ಕಾರ್ಪೋರೇಷನ್ ಕಮಿಷನರ್‌ನವರು ಅಧಿಕಾರಿಗಳು, ಪೋಲೀಸ್ ಕಮಿಷನರ್ ಎಲ್ಲರೂ ಬಂದಿದ್ದರು. ಕ್ರಮ ತೆಗೆದುಕೊಂಡಿದ್ದಾರೆ, ಅಡ್ಡಗೋಡೆ ಹಾಕಿಸಿದ್ದಾರೆ, ಅಡ್ಡಗೋಡೆ ಹಾಕಿಸಿದ ಮೇಲೆ ನನಗೆ ಏನನ್ನಿಸಿದೆ ಎಂದರೆ, ಇದು ಮಾಡಿದ್ದರೆ ನಾವು ಅವರನ್ನು ಬದುಕಿಸಬಹುದಾಗಿತ್ತು ಎಂದು ನನಗೆ ನೋವಿದೆ. ವಿಶೇಷವಾಗಿ ಸರ್ವೇ ಮಾಡಿಸಿ ಇದಕ್ಕೆ ಹೆಚ್ಚಿಗೆ ಏನೂ ದುಡ್ಡು ಬೇಕಾಗಿಲ್ಲ. ಎಲ್ಲೆಲ್ಲಿ ಈ ರೀತಿ ಅಡ್ಡಗೋಡೆಗಳನ್ನು ಕಟ್ಟಿಸಬಹುದು ಅದನ್ನು ಎಲ್ಲಾ ಕಡೆಗಳಲ್ಲಿ ಕಟ್ಟಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಕೆಲವೊಂದು ಬಾರಿ ಇಂತಹ ದುರಂತಗಳು ನಡೆಯುತ್ತವೆ. ಆ ದುರಂತಗಳನ್ನು ನಾವು ತಡೆಯಲಿಕ್ಕೆ ಪ್ರಯತ್ನ ಮಾಡಬೇಕು. ಈಗ ತಾವು ಏನು ಸಲಹೆ ಕೊಟ್ಟಿದ್ದೀರಿ, ಇನ್ನು ಮುಂದೆ ಇಂತಹ ಘಟನೆಗಳು ನಡೆಯದ ರೀತಿಯಲ್ಲಿ, ಇಂತಹ ಅಮಾಯಕರು ಮೃತರಾಗತಕ್ಕಂತಹ ಪರಿಸ್ಥಿತಿಯನ್ನು ನಿಭಾಯಿಸುವ ದೃಷ್ಟಿಯಲ್ಲಿ ನಾವು ಇನ್ನು ಹೆಚ್ಚು ಆಸ್ತೆ ವಹಿಸಬೇಕು ಎನ್ನತಕ್ಕಂತಹ ಮಾರಲ್ ಅನ್ನು ಈ ಒಂದು ಟ್ರಾ ಜೆಡಿಯಿಂದ ಕಲಿತುಕೊಳ್ಳಬೇಕಾಗುತ್ತದೆ. ಕಾರ್ಪೋರೇಷನ್‌ನವರಿಗೆ ನಾನು ಸೂಚನೆ ಮಾಡುವುದೇನೆಂದರೆ, ಇಂತಹ ಘಟನೆಗಳು ಆಗಬಹುದಾದಂತ ಸ್ಥಳಗಳು ಎಲ್ಲವನ್ನು ಕೂಡ ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಿ ಅಲ್ಲಿ ಅವುಗಳ ಬಗ್ಗೆ ಯೋಗ್ಯವಾದ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಹಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರಶ್ನೆ ಕೇಳಿದರೆ, ಆ ಪ್ರಶ್ನೆಗೆ ಸರಿಯಾದ ಉತ್ತರವನ್ನು ಮಾನ್ಯ ಕಮೀಶನರ್‌ರವರಿಗೆ ಅವರ ಅಧಿಕಾರಿಗಳು ಕೊಟ್ಟಿಲ್ಲದಿರುವುದರಿಂದ ಕಮೀಶನರ್‌ರವರೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಏಕೆಂದರೆ ಅಲ್ಲಿ ನಡೆಯುತ್ತಿರುವ ಕೆಲಸಗಳ ಅಂದಾಜೇ ಬೇರೆ ಇದೆ, ಆದರೆ ಇಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದು ಒಂದನೆಯದು. ಇನ್ನು ಎರಡನೆಯದಾಗಿ, ಶಿವಾಜಿನಗರ ಬಸಸ್ಯಾಂಡ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡುವಂಥ ಸಂದರ್ಭದಲ್ಲಿ ಅದರ

ಸುತ್ತಮುತ್ತ ಇರುವ ಜಾಗಕ್ಕೆ ಕಾಂಕ್ರೀಟ್ ಹಾಕುವುದಕ್ಕೆ ಆವಾಗಲೇ ಆದೇಶವನ್ನು ಹೊರಡಿಸಿದರು. ಈಗಾಗಲೇ ಎರಡು ವರ್ಷಗಳಾದರೂ ಆ ಕೆಲಸವನ್ನು ಈವರೆಗೆ ತೆಗೆದುಕೊಂಡಿಲ್ಲ. ಯಾವಾಗ ಆ ಕೆಲಸವನ್ನು ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು: ಅದಕ್ಕೆ ಸೆಪರೇಟ್ ಪ್ರಶ್ನೆಯನ್ನು ಕೇಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಇದು ಶಿವಾಜಿನಗರ ಕ್ಷೇತ್ರದ ವ್ಯಾಪ್ತಿಗೆ ಬರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. 2000ನೇ ಇಸವಿಯಲ್ಲಿಯೇ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರವನ್ನು ಐದಾರು ಕಾಗದಗಳಲ್ಲಿ ಕೊಟ್ಟು ನನ್ನ ಕ್ಷೇತ್ರದಲ್ಲಿ ಆದಷ್ಟು ಬೇಗ ಈ ಕೆಲಸವನ್ನು ಮಾಡುತ್ತೇವೆಂದು ಹೇಳಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ನನಗೆ ಎರಡೇ ನಿಮಿಷ ಮಾತನಾಡಲು ಕಾಲಾವಕಾಶ ಕೊಡಿ.

ಅಧ್ಯಕ್ಷರು: ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಪ್ರಕಾರ ಪ್ರಶ್ನೋತ್ತರ ಮುಂದುವರೆದರೆ ಕೇವಲ ನಾಲ್ಕೇ ಪ್ರಶ್ನೆಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಾನು ಕೇಳಿದ್ದು ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ಕಾಮಗಾರಿಗಳ ಬಗ್ಗೆ. ಅದಕ್ಕೆ ಪೂರಕವಾಗಿಯೇ ಕೇಳಿದ್ದೇನೆ ಹೊರತು ಬೇರೆ ಪ್ರಶ್ನೆಯನ್ನು ಕೇಳಲಿಲ್ಲ.

ಅಧ್ಯಕ್ಷರು: ನಾನು ಒಪ್ಪಿಕೊಂಡೆ. ಪ್ರಶ್ನೆ ಕೇಳಿದ ಬಳಿಕ ನೀವು ಉಪ ಪ್ರಶ್ನೆ ಎಷ್ಟು ಬೇಕೋ ಅಷ್ಟು ಮಾತ್ರ ಕೇಳಬೇಕು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅಷ್ಟನ್ನೇ ನಾನು ಕೇಳುತ್ತಿರುವುದು ಮೊದಲನೆಯದಾಗಿ ಪರಿಹಾರ ಧನವನ್ನು ಒಂದು ಲಕ್ಷ ರೂ.ಗಳನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಂಡೆ. ಈಗಾಗಲೇ 50 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಒಂದು ಲಕ್ಷ ರೂ.ಗಳನ್ನು ಕೊಡುತ್ತೀರೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು. ಎರಡನೆಯದಾಗಿ ಬಸ್ ಸ್ಟ್ಯಾಂಡ್ ಸುತ್ತಮುತ್ತಲೂ ಕಾಂಕ್ರೀಟ್ ಹಾಕಿಸುತ್ತೇವೆಂದು ಹೇಳಿದ್ದೀರಿ. ಅದನ್ನು ಹಾಕಿಸುತ್ತೀರೋ ಇಲ್ಲವೋ? ಹಾಕಿಸಿದರೆ ಯಾವಾಗ ಹಾಕಿಸುತ್ತೀರಿ ಎಂಬ ಬಗ್ಗೆ ಹೇಳಬೇಕು. ಹೊಸ ಮಾರುಕಟ್ಟೆಗಳನ್ನು ಮಾಡಿಸುತ್ತೇವೆಂದು ನನಗೆ ಕಾಗದ ಕೊಟ್ಟಿರಿ. ಅದರಂತೆ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು. ಮೂರನೆಯದಾಗಿ ದೊಡ್ಡ ಮೋರಿ ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕೆಂದು ತಾವು ಹೇಳಿದ್ದೀರಿ. ಆದರೆ ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಇದನ್ನು ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ: ಇವುಗಳೆಲ್ಲಾ ಕಾರ್ಪೋರೇಶನ್‌ನವರು ಮಾಡಿಸಬೇಕಾದ ಕೆಲಸ. ಶಿವಾಜಿನಗರ ಕ್ಷೇತ್ರದಲ್ಲಿ 43 ಲಕ್ಷ ರೂಪಾಯಿಗಳ ಕೆಲಸವನ್ನು ಈ ಮಳೆ ಬಿದ್ದಮೇಲೆ ಪ್ರಾರಂಭಿಸಿದ್ದಾರೆ. ಅವುಗಳನ್ನೆಲ್ಲಾ ಕೂಡ ಈಗ ಪ್ರಾರಂಭಿಸಿ ಕೆಲವು ಕಡೆ ರೀಟೈನಿಂಗ್ ವಾಲ್ ಕಟ್ಟಿಸುವುದಕ್ಕೆ, ಕೆಲವು ಕಡೆ ಆರ್.ಸಿ.ಸಿ. ಡಕ್ಟ್ ಸ್ಲಾಬ್ ಅಂಡ್ ಕಲ್‌ವರ್ಟ್ಸ್‌ನ್ನು ವಸಂತನಗರದಲ್ಲಿ ಮಾಡುವುದಕ್ಕೆ ನಾರಾಯಣ್ ಪಿಳ್ಳೈ ಸ್ಟ್ರೀಟ್‌ನಲ್ಲಿ ಸುಮಾರು 3 ಲಕ್ಷ ರೂಪಾಯಿಗಳಲ್ಲಿ, ಹಾಗೇನೇ

ಬ್ರಾಡ್‌ವೇ ರೋಡ್ ಅಪ್ರೋಚಸ್, ಇವುಗಳನ್ನೆಲ್ಲಾ ಮಾಡುತ್ತಿದ್ದಾರೆ. ಅದರ ವಿವರಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಅದನ್ನು ತಾವು ಪ್ರಾರಂಭಿಸಬೇಕು. ಇದರ ಜೊತೆಗೆ ಶಿವಾಜಿನಗರ ಪ್ರದೇಶದಲ್ಲಿ...

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಶಿವಾಜಿನಗರ ಕ್ಷೇತ್ರದಲ್ಲಿ ಮೂರ್ನಾಲ್ಕು ಕೋಟಿ ರೂಪಾಯಿಗಳ ಕೆಲಸ ನಡೆಯುತ್ತಿದೆ. ನೀವು 43 ಲಕ್ಷ ರೂ.ಗಳನ್ನು ಕೊಟ್ಟಿದ್ದೀರಿ. ಇದು ಏನೇನೂ ಸಾಲದು.

ಅಧ್ಯಕ್ಷರು: ನೀವು ಈ ಬಗ್ಗೆ ಕಮಿಶನರ್ ಹತ್ತಿರ ಹೋಗಿ ಡಿಸ್‌ಕಸ್ ಮಾಡಿ.

ಶ್ರೀ ಎಸ್.ಎಂ. ಕೃಷ್ಣ: ನೀವು ಅಲ್ಲಿ ಮೂರ್ನಾಲ್ಕು ಕೋಟಿ ರೂ.ಗಳ ಕೆಲಸ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ. ಆದರೆ ನಾನು ಹೇಳುತ್ತಿರುವುದು ಮಳೆ ಬಿದ್ದಮೇಲೆ 43 ಲಕ್ಷ ರೂಪಾಯಿಗಳ ಹೆಚ್ಚುವರಿ ಕೆಲಸವನ್ನು ತೆಗೆದುಕೊಂಡಿದ್ದಾರೆ ಎಂದು ಏನು ವರದಿ ಇದೆ ಆ ಬಗ್ಗೆ ಹೇಳಿದೆ. ಅದನ್ನು ನಾನು ಕೂಡ ವೆರಿಫೈ ಮಾಡುತ್ತೇನೆ. ನೀವೂ ಕೂಡ ವೆರಿಫೈ ಮಾಡಿಕೊಳ್ಳಬಹುದು. ಇನ್ನು ಶಿವಾಜಿನಗರ ಪ್ರದೇಶದಲ್ಲಿ ಒಂದು ದೊಡ್ಡ ಮೋರಿ ಮೇಲೆ ಈ ಹಿಂದೆ ನಗರಪಾಲಿಕೆಯವರು ಅಂಗಡಿಗಳನ್ನು ಕಟ್ಟಿಸಿ ಅಲ್ಲಿ ಹೂಳು ತೆಗೆಯಲು ಅಡ್ಡಿಯಾಗಿದೆ, ಈಗ ಮೋರಿಯ ಬದಿಯಲ್ಲಿ ಸಮಾನಾಂತರ ಮೋರಿ ನಿರ್ಮಾಣ ಮಾಡುವ ಯೋಜನೆ ತಯಾರು ಮಾಡಿದ್ದಾರೆ. ಇದರಿಂದ ಶಿವಾಜಿನಗರದ ಸುತ್ತಮುತ್ತ ಬ್ರಾಡ್‌ವೇ, ನಾಲಾ ಸ್ಟ್ರೀಟ್ ಸ್ಥಳಗಳಲ್ಲಿ ಈಗ ಚರಂಡಿ ನೀರು ಮನೆಗಳಿಗೆ ಮತ್ತು ಅಂಗಡಿಗಳಿಗೆ ನುಗ್ಗುವ ಪರಿಸ್ಥಿತಿ ಏನಿದೆ ಅದು ಇದನ್ನು ಮಾಡಿದ ಮೇಲೆ ನಿವಾರಣೆಯಾಗುತ್ತದೆ. ಶಿವಾಜಿನಗರದ ಬಸ್ ಸ್ಟಾ ್ಯಂಡ್ ಸುತ್ತಮುತ್ತ ಕಾಂಕ್ರೀಟ್ ರೋಡ್ ಮಾಡಬೇಕು ಎಂದು ಹೇಳಲಾಗಿದೆ. ಈ ಮಳೆಗಾಲ ಮುಗಿದ ಮೇಲೆ ಮಾಡಲಾಗುವುದು ಈಗ ಮಳೆಗಾಲವೇ ಇನ್ನು ಪ್ರಾರಂಭವಾಗಿಲ್ಲವಲ್ಲ. ಆದುದರಿಂದ ಅತಿ ಶೀಘ್ರದಲ್ಲಿಯೇ ಈ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ.

ಎ.ಡಿ.ಬಿ. ಯೋಜನಾ ಕಾಮಗಾರಿಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

3(58) - ಶ್ರೀ ಜೆ.ಡಿ. ನಾಯಕ್, (ಭಟ್ಕಳ) ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಪುರಸಭೆಗೆ ಎ.ಡಿ.ಬಿ. ಯೋಜನೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಕಾಮಗಾರಿ ಮಂಜೂರಾಗಿ ಹಲವು ವರ್ಷ ಕಳೆದರೂ ಕಾಮಗಾರಿ ಚಾಲನೆಗೆ ವಿಳಂಬ ನೀತಿಗೆ ಕಾರಣವೇನು

ಇ) ಎ.ಡಿ.ಬಿ. ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ.